ಜೆಡಿಎಸ್ ನಾಯಕರಿಂದ ಕೆಪಿಸಿಸಿ ಕಚೇರಿಗೆ ಮುತ್ತಿಗೆ ಯತ್ನ: ಜೆಡಿಎಸ್ ಮಾಜಿ ಎಂಎಲ್‌ಸಿ ರಮೇಶ್ ಗೌಡ ವಶ

ವಿವಿವಿ ನೆಟ್‌ವರ್ಕ್- ಬೆಂಗಳೂರು : ಗ್ರಾಮೀಣಾಭಿವೃದ್ಧಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಹಾಗೂ ಕೆಪಿಎಸ್‌ಸಿ ನೇಮಕಾತಿಯ ಅಕ್ರಮ ಖಂಡಿಸಿ ಜೆಡಿಎಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಕೆಪಿಸಿಸಿ ಕಚೇರಿ ಮತ್ತು ಕೆಪಿಎಸ್‌ಸಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿ ಬೃಹತ್ ಪ್ರತಿಭಟನೆ ನಡೆಸಿದರು.

ಜೆಡಿಎಸ್ ಮಾಜಿ ಎಂಎಲ್‌ಸಿ ಹಾಗೂ ಜಿಬಿಎ ಅಧ್ಯಕ್ಷ ರಮೇಶ್ ಗೌಡ ಮತ್ತು ಮಾಜಿ ಶಾಸಕ ಅಖಂಡ ಶ್ರೀನಿವಾಸ್ ಮೂರ್ತಿ ನೇತೃತ್ವದಲ್ಲಿ ನಡೆದ ಹೋರಾಟದಲ್ಲಿ ನೂರಾರು ಕಾರ್ಯಕರ್ತರು ಭಾಗವಹಿಸಿ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಕೆಪಿಸಿಸಿ ಕಚೇರಿಗೆ ಮುತ್ತಿಗೆ ಯತ್ನ: ಧರಣಿನಿರತರು ವಶಕ್ಕೆ

ಕೆಪಿಸಿಸಿ ಕಚೇರಿ ರಸ್ತೆಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದ್ದು, ಬ್ಯಾರಿಗೇಡ್‌ಗಳನ್ನು ಹಾಕಿ ಪ್ರತಿಭಟನಾಕಾರರನ್ನು ತಡೆಯಲಾಯಿತು. ಈ ವೇಳೆ ಪೊಲೀಸರು ಹಾಗೂ ಜೆಡಿಎಸ್ ಕಾರ್ಯಕರ್ತರ ನಡುವೆ ತೀವ್ರ ವಾಗ್ವಾದ ನಡೆಯಿತು. ಬ್ಯಾರಿಗೇಡ್‌ಗಳನ್ನು ನೂಕಿ ಕಚೇರಿಗೆ ನುಗ್ಗಲು ಯತ್ನಿಸಿದಾಗ ಪರಿಸ್ಥಿತಿ ಉದ್ವಿಗ್ನಗೊಂಡಿತು. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಹಲವು ನಾಯಕರು ಹಾಗೂ ಕಾರ್ಯಕರ್ತರನ್ನು ವಶಕ್ಕೆ ಪಡೆದರು.

ಕೆಪಿಎಸ್‌ಸಿ ಕಚೇರಿ ಬಳಿ ಶರವಣ ಧರಣಿ

ಮತ್ತೊಂದೆಡೆ, ಜೆಡಿಎಸ್ ಕಾನೂನು ಘಟಕದ ನೇತೃತ್ವದಲ್ಲಿ ಕೆಪಿಎಸ್‌ಸಿ ಕಚೇರಿಗೆ ಮುತ್ತಿಗೆ ಹಾಕಲು ಸಿದ್ಧತೆ ನಡೆಸಲಾಗಿತ್ತು. ಸ್ಥಳಕ್ಕಾಗಮಿಸಿದ ವಿಧಾನ ಪರಿಷತ್ ಸದಸ್ಯ ಶರವಣ ಅವರು ಪ್ರತಿಭಟನೆಗೆ ಅವಕಾಶ ನೀಡುವಂತೆ ಪೊಲೀಸರನ್ನು ಒತ್ತಾಯಿಸಿದರು. ಆದರೆ ಭದ್ರತೆಯ ಹಿತದೃಷ್ಟಿಯಿಂದ ಅನುಮತಿ ನಿರಾಕರಿಸಿದಾಗ ಪೊಲೀಸರೊಂದಿಗೆ ಜಟಾಪಟಿ ನಡೆಯಿತು. ಬಳಿಕ ರಸ್ತೆ ಮಧ್ಯದಲ್ಲೇ ಕುಳಿತು ಧರಣಿ ನಡೆಸಿದ ಶರವಣ ಅವರನ್ನು ಪೊಲೀಸರು ಜೀಪ್‌ನಲ್ಲಿ ಕರೆದೊಯ್ದರು.

ಅಂದ್ರಹಳ್ಳಿ ಕೆರೆ ಪಾರ್ಕ್‌ನಲ್ಲಿ ವಿದ್ಯುತ್ ಶಾಕ್ ಆತಂಕ: ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾರ್ವಜನಿಕರ ಆಕ್ರೋಶ

ವಿವಿವಿ ನೆಟ್‌ವರ್ಕ್- ಪೀಣ್ಯ ದಾಸರಹಳ್ಳಿ : ಸಮೀಪದ ಯಶವಂತಪುರ ವಿಧಾನಸಭಾ ಕ್ಷೇತ್ರದ ಅಂದ್ರಹಳ್ಳಿ ವಾರ್ಡಿನ ಅಂದ್ರಹಳ್ಳಿ ಕೆರೆ ಪಾರ್ಕ್‌ನಲ್ಲಿ ವಿದ್ಯುತ್ ಕಂಬಗಳನ್ನು ಮುಟ್ಟಿದರೆ ವಿದ್ಯುತ್ ಶಾಕ್ ಹೊಡೆಯುತ್ತಿರುವ ಆರೋಪ ಕೇಳಿಬಂದಿದ್ದು, ಪಾರ್ಕಿಗೆ ಬರುವ ಸಾರ್ವಜನಿಕರಿಗೆ ಭಯದ ಭೀತಿ ಎದುರಾಗಿದೆ. ಪಾರ್ಕ್‌ನಲ್ಲಿರುವ ಹಲವು ವಿದ್ಯುತ್ ಕಂಬಗಳಲ್ಲಿ ವಿದ್ಯುತ್ ಸೋರಿಕೆಯಾಗುತ್ತಿದೆ ಎಂದು ಆರೋಪಿಸಲಾಗಿದ್ದು, "ಕಂಬಗಳನ್ನು ಮುಟ್ಟಬೇಡಿ, ಮುಟ್ಟಿದರೆ ಶಾಕ್ ಹೊಡೆಯುತ್ತದೆ" ಎಂಬ ಎಚ್ಚರಿಕೆ ನಾಮ ಫಲಕಗಳನ್ನು ಅಳವಡಿಸಲಾಗಿದೆ. ಆದರೆ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸದೆ ಕೇವಲ

ಎಚ್ಚರಿಕೆ ಫಲಕಗಳನ್ನು ಹಾಕಿರುವುದು ಅಧಿಕಾರಿಗಳ ಬೇಜವಾಬ್ದಾರಿತನಕ್ಕೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಂದ್ರಹಳ್ಳಿ ವಾರ್ಡಿನ ಕಾಂಗ್ರೆಸ್ ಅಧ್ಯಕ್ಷ ಮುನಿರಾಜು ಅವರು ಅಧಿಕಾರಿಗಳ ಕಾರ್ಯವೈಖರಿ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಸಾರ್ವಜನಿಕರ ಪ್ರಾಣಕ್ಕೆ ಅಪಾಯವಿರುವ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದ್ದಾರೆ.

ಅದೇ ರೀತಿ ಅಂದ್ರಹಳ್ಳಿ ವಾರ್ಡಿನ ಕಾಂಗ್ರೆಸ್ ಆಕಾಂಕ್ಷಿ ಅಭ್ಯರ್ಥಿ ಟಿ. ಪ್ರಕಾಶ್ ಮಾತನಾಡಿ, ಪಾರ್ಕ್‌ಗೆ ಪ್ರತಿದಿನ ನೂರಾರು ಜನರು ವಾಯುವಿಹಾರಕ್ಕಾಗಿ ಬರುತ್ತಾರೆ. ಯಾವುದೇ ಕಂಬವನ್ನು ಮುಟ್ಟಿದರೂ ವಿದ್ಯುತ್ ಶಾಕ್ ಹೊಡೆಯುವ ಪರಿಸ್ಥಿತಿ ಇದ್ದರೆ, ಅನಾಹುತ ಸಂಭವಿಸಿದ ಸಂದರ್ಭದಲ್ಲಿ ಸಾರ್ವಜನಿಕರ ಪ್ರಾಣಕ್ಕೆ ಯಾರು ಹೊಣೆ ಎಂದು ಪ್ರಶ್ನಿಸಿದ್ದಾರೆ.

"ಅಧಿಕಾರಿಗಳನ್ನು ಪ್ರಶ್ನಿಸಿದಾಗ ಸಮಸ್ಯೆ ನಮಗೆ ಸಂಬಂಧಪಟ್ಟಿಲ್ಲ ಎಂಬ ರೀತಿಯ ಉತ್ತರಗಳು ಬರುತ್ತಿವೆ. ಆದರೆ ಸಮಸ್ಯೆಗೆ ಮಾತ್ರ ಪರಿಹಾರ ಸಿಗುತ್ತಿಲ್ಲ. ಪಾರ್ಕ್‌ನ ಹಲವು ವಿದ್ಯುತ್ ಉಪಕರಣಗಳ ಮೇಲೆ ಸಮಸ್ಯೆ ಇದೆ ಎಂಬ ಎಚ್ಚರಿಕೆ ಬರೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಪಾರ್ಕ್‌ನ ವಿದ್ಯುತ್ ನಿರ್ವಹಣೆಯ ದುಸ್ಥಿತಿಯನ್ನು ತೋರಿಸುತ್ತದೆ," ಎಂದು ಅವರು ಆರೋಪಿಸಿದ್ದಾರೆ. ವಿದ್ಯುತ್ ಕಂಬಗಳಿಂದ ಸಾರ್ವಜನಿಕರಿಗೆ ಅಪಾಯವಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ವಿದ್ಯುತ್ ಸಂಪರ್ಕವನ್ನು ಪರಿಶೀಲಿಸಿ, ದೋಷಪೂರಿತ ಕಂಬಗಳು ಹಾಗೂ ವಿದ್ಯುತ್ ಉಪಕರಣಗಳನ್ನು ದುರಸ್ತಿ ಮಾಡಬೇಕು. ಪಾರ್ಕ್‌ಗೆ ಭೇಟಿ ನೀಡುವ ಸಾರ್ವಜನಿಕರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಇದರ ಜೊತೆಗೆ ಅಂದ್ರಹಳ್ಳಿ ಕೆರೆ ಪಾರ್ಕ್‌ನಲ್ಲಿ ಹಾವುಗಳ ಕಾಟವೂ ಹೆಚ್ಚಾಗಿದೆ ಎಂಬ ಆರೋಪ ಕೇಳಿಬಂದಿದೆ. ವಾಯುವಿಹಾರಿಗಳು ಓಡಾಡುವ ವೇಳೆ ಹಾವುಗಳು ಕಾಣಿಸಿಕೊಳ್ಳುತ್ತಿದ್ದು, ಪಾರ್ಕ್‌ನ ಸ್ವಚ್ಛತೆ, ಪೊದೆಗಳ ತೆರವು ಮತ್ತು ಸುರಕ್ಷತಾ ವ್ಯವಸ್ಥೆಗಳ ಬಗ್ಗೆ ಕೂಡ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಅಂದ್ರಹಳ್ಳಿ ವಾರ್ಡಿನ ಕಾಂಗ್ರೆಸ್ ಅಧ್ಯಕ್ಷ ಮುನಿರಾಜು, ಜಿಬಿಎ ಪ್ರಬಲ ಆಕಾಂಕ್ಷಿ ಅಭ್ಯರ್ಥಿ ಟಿ ಪ್ರಕಾಶ್, ಮಹಿಳಾ ಘಟಕದ ಅಧ್ಯಕ್ಷೆ ಜಲಜ, ಗೋಪಾಲಣ್ಣ, ಶ್ರೀನಿವಾಸ್, ಮಧು, ರಾಮಣ್ಣ, ಸಾವಿತ್ರಿಮ್ಮ, ಪೂರ್ಣಿಮ, ಆಶಾ, ಗೀತ, ವಸಂತಮ್ಮ, ಪಂಕಜ, ಗೌರಮ್ಮ, ಚೆಲುವಮ್ಮ, ವಸಂತ,ಲತಾ,ಇಂದ್ರ ಸೇರಿದಂತೆ ಕಾಂಗ್ರೆಸ್ ಮುಖಂಡರು ಮಹಿಳೆಯರು ಕಾರ್ಯಕರ್ತರು ಮುಂತಾದವರು ಇದ್ದರು.

ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸುವ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ : ಎಸ್.ಮನೋಹರ್

ವಿವಿವಿ ನೆಟ್‌ವರ್ಕ್- ಬೆಂಗಳೂರು: ರಾಹುಲ್ ಗಾಂಧಿಯವರ ವಿರುದ್ಧವೇ ಎಫ್‌ಐಆರ್ ದಾಖಲಿಸುವ ಮೂಲಕ ಪ್ರಜಾಪ್ರಭುತ್ವ ಹಾಗೂ ಸಂವಿಧಾನವನ್ನು ಕಗ್ಗೊಲೆ ಮಾಡಲು ಬಿಜೆಪಿ ನಿರ್ಧರಿಸಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಮನೋಹರ್ ಆರೋಪಿಸಿದ್ದಾರೆ.

ಗಾಂಧಿ ಭವನದ ಮುಂದೆ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನರೇಂದ್ರ ಮೋದಿಯ ಸರ್ವಾಧಿಕಾರಿ ಆಡಳಿತದಲ್ಲಿ ಪ್ರಜಾಪ್ರಭುತ್ವ ಹಾಗೂ ಸಂವಿಧಾನ ಎರಡು ಕಗ್ಗೊಲೆಯಾಗುತ್ತಿದೆ. ದಲಿತರನ್ನು ಅಪಮಾನಿಸಿದ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಿ ಅಂದರೆ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ವಿರುದ್ದವೇ ಎಫ್‌ಐಆರ್ ದಾಖಲಿಸುವುದರ ಮೂಲಕ ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರನ್ನು ಪ್ರಶ್ನಿಸುವ ಹಕ್ಕು ಸಂವಿಧಾನ ನೀಡಿದೆ. ಆದರೆ ಬಾಬಾ ಸಾಹೇಬ್ ಅಂಬೇಡ್ಕರ್ ನೀಡಿರುವ ಸಂವಿಧಾನದ ಹಕ್ಕನ್ನು ಬಿಜೆಪಿ ಕಸಿಯುತ್ತಿದೆ ಎಂದು ಆರೋಪಿಸಿದ್ದಾರೆ. ಭ್ರಷ್ಟ ಬಿಜೆಪಿ ಸರ್ವಾಧಿಕಾರ ರಾಹುಲ್ ಗಾಂಧಿ ವಿರುದ್ಧ ದಾಖಲಿಸಿರುವ ಪ್ರಕರಣವನ್ನು ಕೂಡಲೇ ಹಿಂಪಡೆಯಬೇಕು. ರಾಹುಲ್ ಗಾಂಧಿಯವರ ವಿರುದ್ಧ ದಾಖಲಿಸಿರುವ ಪ್ರಕರಣ ಅದು ದೇಶದ ನಾಗರೀಕರ ಮೇಲೆ ದಾಖಲಿಸುವ ಪ್ರಕರಣವೆಂದು ಈಗಾಗಲೇ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಕೇವಲ ಆರು ವರ್ಷದ ಬಾಲಕನಿಗೆ ಉತ್ತರಿಸಲು ಯೋಗ್ಯತೆ ಇಲ್ಲದ ಬಿಜೆಪಿ ಸರ್ಕಾರ ಇಂದು ನಾಗರೀಕರ ಹಕ್ಕನ ಕಸಿಯುತ್ತಿದೆ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಅಂದ್ರಹಳ್ಳಿ ವಾರ್ಡಿನ ಕಾಂಗ್ರೆಸ್ ಅಧ್ಯಕ್ಷ ಮುನಿರಾಜು, ಜಿಬಿಎ ಪ್ರಬಲ ಆಕಾಂಕ್ಷಿ ಕೆಪಿಸಿಸಿ ವಕ್ತಾರರಾದ ಎಂ.ಲಕ್ಷ್ಮಣ್ ರವರು ಎ.ಆನಂದ್, ಪ್ರಕಾಶ್, ಪರಿಸರ ರಾಮಕೃಷ್ಣ, ಉಮೇಶ್, ಪುಟ್ಟರಾಜು, ಕುಶಾಲ್ ಗೌಡ, ಸುಂಕದಕಟ್ಟೆ ನವೀನ್, ಮಾಧವಹನೂರು, ಸಾಯಿನ್ ವೀನ್, ಕಿಶೋರ್,,ಶಾಹಿನ್ ಶರೀಫ್ ಭಾಗವಹಿಸಿದ್ದರು.

ಇ-ಹರಾಜು ಸೂಚನೆ

ಬೆಂಕಿಯ ಪರಿಣಾಮ ಅಂದಾಜು 19,000 ಕೆಜಿ ಎಂಎಸ್ ಮತ್ತು ಸುಮಾರು 3,250 ಕೆಜಿ ಎಸ್‌ಎಸ್ ಮೆಟೀರಿಯಲ್

"ಬೆಂಕಿ ಪೀಡಿತ ಅಂದಾಜು 19,000 ಕೆಜಿ ಎಂಎಸ್ ಮತ್ತು ಅಂದಾಜು 3,250 ಕೆಜಿ ಎಸ್‌ಎಸ್ ಸಾಮಗ್ರಿ" ಗಳನ್ನು "ಪ್ರತಿ ಕೆಜಿಗೆ" ಆಧಾರದ ಮೇಲೆ ವಿಲೇವಾರಿ ಮಾಡಲು ಇ-ಹರಾಜಿನಲ್ಲಿ ಭಾಗವಹಿಸಲು ಆಸಕ್ತ ಖರೀದಿದಾರರನ್ನು ಆಹ್ವಾನಿಸಲಾಗಿದೆ. ಕಚ್ಚಾವಸ್ತುವನ್ನು "ಹೇಗಿದೆಯೋ ಹಾಗೆಯೇ", ಏನೇನಿದೆಯೋ ಹಾಗೆಯೇ" ಮತ್ತು "ಯಾವುದೇ ದೂರು ಇಲ್ಲ"ಎಂಬ ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ ಮತ್ತು ಇದು **ಮೆಸರ್ಸ್. ದಿವ್ಯಾ ಆಮದುದಾರರಿಗೆ** ಸೇರಿದೆ. ಹೇಳಿದ ಸಾಮಗ್ರಿಗಳನ್ನು 5/ಡಿ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಜಿಗಣಿ ಲಿಂಕ್ ರಸ್ತೆ ಶೆಲ್ ಪೆಟ್ರೋಲ್ ಪಂಪ್ ಎದುರು, ಮಾರುತಿ ತೂಕ ಸೇತುವೆ ಬಳಿ, ಬೆಂಗಳೂರು, ಕರ್ನಾಟಕ 560099 ಇಲ್ಲಿ **02-09-2026 ರಿಂದ 10-09-2026 ರವರೆಗೆ ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ** ಕೆಲಸದ ದಿನಗಳಲ್ಲಿ ಮಾತ್ರ ಪರಿಶೀಲಿಸಬಹುದು. ಪರಿಶೀಲನೆಗಾಗಿ ದಯವಿಟ್ಟು **ಶ್ರೀ ಹರಿನಾಥ್ ಅವರನ್ನು 9844037213** ನಲ್ಲಿ ಸಂಪರ್ಕಿಸಿ.

ಇ-ಹರಾಜು 11-09-2026 ರಂದು ನಡೆಯಲಿದೆ

ಇ-ಹರಾಜಿನ ನಿಯಮಗಳು ಮತ್ತು ಷರತ್ತುಗಳನ್ನು ಒಳಗೊಂಡಿರುವ ನಮೂನೆಯನ್ನು ಪಡೆಯಲು ದಯವಿಟ್ಟು **ಶ್ರೀ ಅನುಪ್ ಕುಮಾರ್** ಅವರನ್ನು **8928293156** ನಲ್ಲಿ ಸಂಪರ್ಕಿಸಿ. ಅಥವಾ ವೆಬ್‌ಸೈಟ್ **https://www.sealthedeal.co.in/** ನಿಂದ ಡೌನ್‌ಲೋಡ್ ಮಾಡಬಹುದು.

ಹರಾಜುದಾರರು: ಸೀಲ್ ದಿ ಡೀಲ್
ನೋಂದಾಯಿತ ಕಚೇರಿ: 5ನೇ ಮಹಡಿ, ಕಚೇರಿ ಸಂಖ್ಯೆ 2, ಕಿಂಗ್ಸ್ ಮಾಲ್, ರೋಹಿಣಿ ಸೆಕ್ಟರ್ 10, ದೆಹಲಿ - 110 085.

ಫಾರ್ಮ್ ಮತ್ತು ಇಎಂಡಿ ಡಿಮಾಂಡ್ ಡ್ರಾಫ್ಟ್ ಸಲ್ಲಿಸಲು ಕೊನೆಯ ದಿನಾಂಕ 10-09-2026

ಇಂಡಿಯನ್ ಬ್ಯಾಂಕ್ Indian Bank
ಇಲಾಹಾಬಾದ್ ALLAHABAD

ಕೆ2 ಹ್ಯಾಬಿಟೇಟ್, ಮಂಗಳಾದೇವಿ ದೇವಸ್ಥಾನ ರಸ್ತೆ, ಪಾಂಡೇಶ್ವರ, ಮಂಗಳೂರು
ಶಾಖೆ: ಮಂಗಳೂರು, ದೂರವಾಣಿ: 08258-232444

ಅಪೆಂಡಿಕ್ಸ್-IV-"ಎ" [ನಿಯಮ 8 (6)ನ್ನು ನೋಡಿ]
ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ

ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್, 2002ನ್ನು ಓದಿಕೊಂಡಂತೆ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ಅನ್ವಯ ಇ-ಹರಾಜು ಮಾರಾಟ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ಹಾಗೂ ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ಸೂಚನೆ ನೀಡುವುದೇನೆಂದರೆ, ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಪೂರಕ ಭದ್ರತಾದಾರರಿಗೆ ಅಡಮಾನ ಮಾಡಿದ್ದು, ಅದನ್ನು ಅಧಿಕೃತ ಅಧಿಕಾರಿಗಳು, **ಇಂಡಿಯನ್ ಬ್ಯಾಂಕ್, ಮಂಗಳೂರು ಶಾಖೆ** ಇವರು ಭೌತಿಕ/ರಚನಾತ್ಮಕ / ಸಾಂಕೇತಿಕವಾಗಿ (ಯಾವುದು ಅನ್ವಯಿಸುತ್ತದೆಯೋ ಅದು) 01.02.2016 ರಂದು ಸ್ವಾಧೀನಪಡಿಸಿಕೊಂಡಿದ್ದು, **ಪೂರಕ ಭದ್ರತಾದಾರರಾದ ಇಂಡಿಯನ್ ಬ್ಯಾಂಕ್, ಮಂಗಳೂರು ಶಾಖೆ** ಇವರಿಗೆ **ಬರಬೇಕಾದ ಬಾಕಿ ಹಣ ರೂ.49,15,998/- (ರೂಪಾಯಿ ನಲವತ್ತೊಂಬತ್ತು ಲಕ್ಷ ಹದಿನೈದು ಸಾವಿರದ ಒಂಬತ್ತು ನೂರ ತೊಂಬತ್ತೆಂಟು ಮಾತ್ರ** (01.09.2026 ರಂತೆ ಮತ್ತು ಹೇಳಲಾದ ಮೊತ್ತವು 02.09.2026 ರಿಂದ ಮರುಪಾವತಿ ದಿನಾಂಕದವರೆಗೆ) ಒಪ್ಪಿದ ದರದಲ್ಲಿ ಹೆಚ್ಚಿನ ಬಡ್ಡಿ ಮತ್ತು ಶುಲ್ಕಗಳನ್ನು ಹೊಂದಿರುತ್ತದೆ) **1. ಮೆ. ಗಾಲಿಬ್ ಫುಡ್ ಕಾರ್ಪೊರೇಷನ್,** 4-133/4, ಕುಟ್ಟಾ ಪದವ್, ಪೆರ್ಮಾಯಿ, ಉಯಲಿಬೆಟ್ಟು, ಮಂಗಳೂರು ತಾಲೂಕು. **2. ಶ್ರೀ ಸಜ್ಜಾದ್ ತುಂಬೆ,** 2-197, ಮುಬಾರಕ್ ಮಹಲ್, ಹಳೆನೀರು ರಸ್ತೆ, ತುಂಬೆ, ಬಂಟ್ವಾಳ. **3.ಶ್ರೀಮತಿ ನವೀದಾ ಜಾನು,** ಮುಬಾರಕ್ ಮಹಲ್, ತುಂಬೆ, ಬಂಟ್ವಾಳ, ತುಂಬೆ-574 143 **(ಜಾಮೀನುದಾರ).** ಇವರಿಂದ ಬಾಕಿ ಇದ್ದು ಅದಕ್ಕಾಗಿ ಅದನ್ನು **"ಎಲ್ಲಿದೆಯೋ ಹಾಗೆಯೇ" ಮತ್ತು "ಏನಿದೆಯೋ ಹಾಗೆಯೇ" " ಏನಿರುತ್ತದೆಯೋ ಹಾಗೆಯೇ"** ಅದರ ಆಧಾರದ ಮೇಲೆ ಯಾವುದೇ ಅವಲಂಬನೆ ಇಲ್ಲದೆ **ದಿನಾಂಕ 18.09.2026 ರಂದು** ಮಾರಾಟ ಮಾಡಲಾಗುವುದು. ಇ-ಹರಾಜು ಮೂಲಕ ಮಾರಾಟ ಮಾಡಲಿರುವ ಆಸ್ತಿಗಳ ನಿರ್ದಿಷ್ಟ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಆಸ್ತಿಯ ವಿವರವಾದ ವಿವರಣೆ	ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಬಂಟ್ವಾಳ ತಾಲೂಕು, ಬಂಟ್ವಾಳ ಉಪ-ನೋಂದಣಿ ಕಚೇರಿ, ದಕ್ಷಿಣ ಕೆ ಜಿಲ್ಲೆ, ತುಂಬೆ ಗ್ರಾಮದಲ್ಲಿ 9.88 ಸೆಂಟ್ಸ್ ವಿಸ್ತೀರ್ಣದ ಕೃಷಿಯೇತರ ಸ್ಥಿರ ಆಸ್ತಿ, ಖಾಜ ಸಂಖ್ಯೆ 125/2ಎ2 ರಲ್ಲಿ ಭೂಮಾಲೀಕರು ಮತ್ತು ಅದಕ್ಕೆ ಸಂಬಂಧಿಸಿದ ಹಕ್ಕುಗಳನ್ನು ಹೊಂದಿರುವ. **ಗಡಿಗಳು:** ಪೂರ್ವ: ಅದೇ ಭಾಗ ಮತ್ತು ರಸ್ತೆ. ದಕ್ಷಿಣ: ಅದೇ ಭಾಗ ಮತ್ತು ರಸ್ತೆ, ಪಶ್ಚಿಮ: ಅದೇ ಭಾಗ ಮತ್ತು ರಸ್ತೆ, ಉತ್ತರ: ಅದೇ ಭಾಗ ಮತ್ತು ರಸ್ತೆ.
ಆಸ್ತಿಯ ಮೇಲಿನ ಹೊರೆಗಳು	**ಇಲ್ಲ**
ಮೀಸಲು ಬೆಲೆ	**ರೂ. 12,03,200/-**
ಇಎಂಡಿ ಮೊತ್ತ	**ರೂ. 1,21,000/-**
ಬಿಡ್ ಹೆಚ್ಚಳದ ಮೊತ್ತ	**ರೂ. 50,000/-**
ಇ-ಹರಾಜಿನ ದಿನಾಂಕ ಮತ್ತು ಸಮಯ	**18.09.2026, ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ.**
ಆಸ್ತಿ ಐಡಿ ಸಂಖ್ಯೆ	**IDIB6071084021**

ಬಿಡ್ಡುದಾರರು ನಮ್ಮ ಇ-ಹರಾಜು ಸೇವಾ ಪೂರೈಕೆದಾರರಾದ **ಪಿಎಸ್‌ಬಿ ಆಲಯನ್ಸ್ ಪ್ರೈ. ಲಿ.** ರವರ ಜಾಲತಾಣ **(https://www.ebkray.in)** ಗೆ ಆನ್‌ಲೈನ್ ಬಿಡ್ ಸಲ್ಲಿಸುವ ಮೊದಲು ಭೇಟಿ ನೀಡಲು ಕೋರಲಾಗಿದೆ. ತಾಂತ್ರಿಕ ಸಹಾಯ ಬೇಕಾದಲ್ಲಿ ದಯವಿಟ್ಟು **8291220220** ಗೆ ಕರೆ ಮಾಡಿ. ನೋಂದಣಿಗಾಗಿ ಮತ್ತು ಇಎಂಡಿ ಸ್ಥಿತಿಗತಿ ತಿಳಿಯಲು **support.ebkray@psballiance.com** ನ್ನು ಸಂಪರ್ಕಿಸಿ.
ಆಸ್ತಿ ವಿವರಗಳಿಗಾಗಿ ಮತ್ತು ಆಸ್ತಿ ಹರಾಜಿನ ನಿಯಮ ಮತ್ತು ನಿಬಂಧನೆಗಳಿಗಾಗಿ **https://www.ebkray.in** ಗೆ ಭೇಟಿ ನೀಡಿ ಮತ್ತು ಈ ಪೋರ್ಟಲ್‌ಗೆ ಸಂಬಂಧಿಸಿದಂತೆ ಯಾವುದೇ ಸ್ಪಷ್ಟೀಕರಣಕ್ಕಾಗಿ **ಪಿಎಸ್‌ಬಿ ಆಲಯನ್ಸ್ ಪ್ರೈ.ಲಿ.,** ನ ಸಂಪರ್ಕ ಸಂಖ್ಯೆ **8291220220.** ಗೆ ಕರೆ ಮಾಡಿ.
ಬಿಡ್‌ದಾರರು **https://www.ebkray.in** ವೆಬ್‌ಸೈಟ್‌ನಲ್ಲಿ ಆಸ್ತಿಯನ್ನು ಹುಡುಕುವಾಗ ಮೇಲೆ ತಿಳಿಸಲಾದ ಆಸ್ತಿ ಐಡಿ ಸಂಖ್ಯೆಯನ್ನು ಬಳಸಲು ಸೂಚಿಸಲಾಗಿದೆ.

ದಿನಾಂಕ: 01.09.2026 — **ಅಧಿಕೃತ ಅಧಿಕಾರಿ,**
ಸ್ಥಳ: ಮಂಗಳೂರು — **ಇಂಡಿಯನ್ ಬ್ಯಾಂಕ್**

GOKAK TEXTILES LIMITED

**ಗೋಕ